ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 5, November-December 2025, Pp. 82-86
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# 1853ರ ಮೈಸೂರು ಸಂಸ್ಥಾನದಲ್ಲಿ ಶಿಕ್ಷಣದ ವಿಸ್ತರಣೆ

**ಸವಿತ ಕೆ.ಎಸ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

**Abstract:**
*ದಕ್ಷಿಣ ಭಾರತವನ್ನು ಆಳಿದ ರಾಜ ಮನೆತನಗಳಲ್ಲಿ ಮೈಸೂರು ಒಡೆಯರ ರಾಜ ಮನೆತನ ಅಭಿವೃಧಿ ಪರ್ವದಲ್ಲಿ ತನ್ನದೇ ಆದ ಛಾಪು ಮೂಡಿಸಿ ಪ್ರಗತಿ ಪರ ಆಡಳಿತ ನೀಡಿದ ರಾಜಮನೆತನ ಎಂಬ ಹೆಗ್ಗಳಿಕೆಗೆ ಕಾರಣವಾಗಿದೆ. 1399ರಲ್ಲಿ ಯದುರಾಯನಿಂದ ಆರಂಭಗೊಂಡು 1947ರ ವರೆಗೆ ಸುಧೀರ್ಘ ಕಾಲ ಆಳ್ವಿಕೆ ನಡೆಸಿದ ಮೈಸೂರು ಮನೆತನವು ಕರ್ನಾಟಕದ ಸಂಸ್ಕೃತಿಗೆ ಧರ್ಮ, ಸಾಹಿತ್ಯ, ಸಂಗೀತ, ಕಲೆ, ಕೃಷಿ, ನೀರಾವರಿ, ಶಿಕ್ಷಣ, ಕೈಗಾರಿಕೆ, ವೈದ್ಯಕೀಯ, ಬ್ಯಾಂಕಿಂಗ್, ಸಾರಿಗೆ, ನಗರಾಭಿವೃಧಿ, ಕುಡಿಯುವ ನೀರು ಮೊದಲಾದ ಕ್ಷೇತ್ರಗಳಲ್ಲಿ ತನ್ನದೇ ಆದ ಕೊಡುಗೆ ನೀಡಿದೆ. ಪ್ರಸ್ತುತ ಲೇಖನದಲ್ಲಿ 1853ರ ಮೈಸೂರು ಸಂಸ್ಥಾನದಲ್ಲಿ ಶಿಕ್ಷಣದ ವಿಸ್ತರಣೆ ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಮೈಸೂರು ಸಂಸ್ಥಾನ, ಮೈಸೂರು ಅರಸರು, ಶೈಕ್ಷಣಿಕ ಅಭಿವೃದ್ಧಿ, ಶಿಕ್ಷಣ ವಿಸ್ತರಣೆ*

## ಪೀಠಿಕೆ

ಟಿಪ್ಪುವನ್ನು 1799ರಲ್ಲಿ ಹತ್ತಿಕ್ಕಿದ ಬ್ರಿಟಿಷರು ಮೈಸೂರು ರಾಜ್ಯವನ್ನು 4 ಭಾಗಗಳಾಗಿ ಮಾಡಿ ಮರಾಠರು, ಹೈದರಾಬಾದಿನ ನಿಜಾಮ ಮತ್ತು ಮೈಸೂರಿನ ಒಡೆಯರೊಡನೆ ಹಂಚಿಕೊಂಡರು. ಸಿಂಹ ಪಾಲು ಬ್ರಿಟಿಷರ ವಶವಾಯಿತು. ಬ್ರಿಟಿಷರು ಮೈಸೂರು ಒಡೆಯರ ಜೊತೆ ಶ್ರೀರಂಗಪಟ್ಟಣ ಒಪ್ಪಂದ ಮಾಡಿಕೊಂಡು, ಅದರಂತೆ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಮೈಸೂರಿನ ರಾಜರನ್ನಾಗಿ ನೇಮಿಸಲಾಯಿತು. ಆದರೆ ಇವರು ಅಪ್ರಾಪ್ತ ವಯಸ್ಕರಾದುದರಿಂದ ಇವರ ಪರವಾಗಿ ದಿವಾನ್ ಪೂರ್ಣಯ್ಯನವರನ್ನು ನೇಮಿಸಿದರು. ಇವರು 1811 ರಲ್ಲಿ ನಿವೃತ್ತರಾದ ನಂತರ ಪ್ರಾಪ್ತವಯಸ್ಕರಾದ ಮುಮ್ಮಡಿ ಕೃಷ್ಣರಾಜ ಒಡೆಯರು ಅಧಿಕಾರದ ಚುಕ್ಕಾಣಿ ಹಿಡಿದರು. ಆದರೆ ಇವರ ಕಾಲದಲ್ಲಿ 1830–31 ರಲ್ಲಿ ಸಂಭವಿಸಿದ ನಗರ ದಂಗೆಯನ್ನು ಅಡಗಿಸಲು ಬ್ರಿಟಿಷರ ಸಹಾಯ ಪಡೆದಿದ್ದರಿಂದ ಇವರನ್ನು ಅಸಮರ್ಥ ರಾಜರೆಂದು ಅಧಿಕಾರದಿಂದ ತೆಗೆದು ಹಾಕಿ ಕಮಿಷನರ್ ಆಳ್ವಿಕೆಗೆ ನಾಂದಿ ಹಾಡಿದರು.

ಕಮಿಷನರ್‌ಗಳ ಆಳ್ವಿಕೆಯಲ್ಲಿ ಪ್ರಖ್ಯಾತನಾದ ಮಾರ್ಕ್ ಕಬ್ಬನ್ ಕಾಲದಲ್ಲಿ ದೇಶಿಯ ಶಿಕ್ಷಣಕ್ಕೂ ಪ್ರಾಮುಖ್ಯತೆಯನ್ನು ನೀಡಲಾಯಿತು. ಈ ಕಾರ್ಯದಲ್ಲಿ ಕ್ರೈಸ್ತ ಪಾದ್ರಿ ಮತ್ತು ಹೆಸರಾಂತ ಶಿಕ್ಷಣ ತಜ್ಞರಾದ ರೆವರೆಂಡ್ ಜೆ ಗ್ಯಾರೆಟ್ 1853ರಲ್ಲಿ ವೆಸ್ಲಿಯನ್ನು ಮಿಷನರಿಗಳು ಆಂಗ್ಲ ದೇಶಿಯ ಪಾಠ ಶಾಲೆಗಳನ್ನು ಸ್ಥಾಪಿಸಲು ಸರ್ಕಾರಕ್ಕೆ ಪತ್ರದ ಮೂಲಕ

**Please cite this article as:** ಸವಿತ, ಕೆ.ಎಸ್. (2025). 1853ರ ಮೈಸೂರು ಸಂಸ್ಥಾನದಲ್ಲಿ ಶಿಕ್ಷಣದ ವಿಸ್ತರಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(5), 82–86

ಮನವಿ ಮಾಡಿದನು. ಈ ಮನವಿ ಪತ್ರದಲ್ಲಿ ಗ್ಯಾರೆಟ್ ಮೈಸೂರು ಸಂಸ್ಥಾನದಲ್ಲಿ ದೇಶಿಯ ಆಂಗ್ಲ ಶಿಕ್ಷಣಕ್ಕೆ ನೀಡಿದ ಪ್ರಾಮುಖ್ಯತೆಯನ್ನು ಗಮನಿಸಬಹುದು. ಅವುಗಳಲ್ಲಿ ಪ್ರಮುಖ ವಿಚಾರಗಳನ್ನು ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

ಸರ್ಕಾರವು ಶಿಕ್ಷಣವನ್ನು ಬೆಳಸಲು ನುರಿತ ಅಧ್ಯಾಪಕರುಗಳನ್ನು ಬದಲಾಯಿಸುತ್ತಾ, ಸಮಾಜಕ್ಕೆ ಅನುಗುಣವಾಗಿ ಅವರ ಸೇವಾ ಅವಧಿಯನ್ನು ಬಳಸಿಕೊಳ್ಳುತ್ತಿರುವುದು ಉತ್ತಮವಾದ ಕೆಲಸವಾಗಿದೆ. ಹಾಗೆಯೇ ಮುಂದಿನ ಭಾರಿ ಕೂಡ ಅನುಭವ ಹೊಂದಿದ ಅಧ್ಯಾಪಕರುಗಳನ್ನು ಹುದ್ದೆಗೆ ಅನುಗುಣವಾಗಿ ನೇಮಿಸುವುದು ನಮ್ಮ ಗುರಿಯಾಗಿದೆ.

ಈ ಮೊದಲೇ ಮೈಸೂರು ಪ್ರಾಂತ್ಯದಲ್ಲಿರುವ ಶಾಲೆಗಳು ಶಿಕ್ಷಕರನ್ನು ಮತ್ತು ಸವಲತ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಹೊಂದಿ ಕಾರ್ಯ ನಿರ್ವಹಿಸುತ್ತಿದ್ದರೂ, ಸಾಮಾಜಿಕ ಕಳಕಳಿಯಿಂದ ಕೂಡಿದ, ಉನ್ನತ ಶಿಕ್ಷಣವನ್ನು ಅಭಿವೃಧಿ ಪಡಿಸಲು, ವಿವೇಚನಾ ಜ್ಞಾನವನ್ನು ಒದಗಿಸುವ ಶಿಕ್ಷಣವನ್ನು ಮೈಸೂರು ಸಂಸ್ಥಾನದಲ್ಲಿ ಅಳವಡಿಸುವುದು ಕಷ್ಟ ಸಾದ್ಯವಾದರೂ ಅವಕಾಶ ನೀಡಲು ತಿಳಿಸಿದರು.

ಈಗಾಗಲೇ ನಿಯೋಜಿತ ಆಂಗ್ಲ ಭಾಷಾ ಶಿಕ್ಷಕರು 300–400 ವಿದ್ಯಾರ್ಥಿಗಳಿಗೆ ಆಂಗ್ಲ ಭಾಷೆಯನ್ನು ಹೇಳಿಕೊಡುತ್ತಿದ್ದು ಅದರಿಂದ ಯಾವ ವಿದ್ಯಾರ್ಥಿಗಳಿಗೂ ಗುಣಮಟ್ಟದ ಭಾಷಾ ಜ್ಞಾನದ ಪ್ರಯೋಜನ ತಲುಪುತ್ತಿಲ್ಲ. ಇದಕ್ಕೆ ಕಾರಣ ಶಿಕ್ಷಕರಿಗೆ ನೀಡುತ್ತಿರುವ ಕಡಿಮೆ ವೇತನ ಶಿಕ್ಷಕರನ್ನು ಮತ್ತು ವಿದ್ಯಾರ್ಥಿಗಳನ್ನು ಹಿಂಸಿಸುತ್ತಿದೆ. ನಾವು ಆಂಗ್ಲ ಭಾಷಾ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಭಾಷೆಯಲ್ಲಿ ನುರಿತ ಶಿಕ್ಷಕರ ನೇಮಕ ಅವಶ್ಯವಾಗಿರುವುದರಿಂದ ಪರ್ಯಾಯವಾಗಿ ಇಂಗ್ಲೀಷ್ ಮಿಷನರಿಗಳನ್ನು ಭಾಷೆಯನ್ನು ಬೋಧಿಸಲು ಕೇಂದ್ರ ಬಿಂದುಗಳನ್ನಾಗಿ ನೇಮಿಸಿಕೊಳ್ಳುವುದು ಅವಶ್ಯಕ.

ಇದರ ಕುರಿತಾಗಿ ಮೊದಲು ನಾವು ಮಾಡಬೇಕಾಗಿರುವ ಕೆಲಸವೆಂದರೆ, ಕ್ರೈಸ್ತ ಮಿಷನರಿಗಳ ಶಾಲಾ ಶಿಕ್ಷಕರುಗಳಿಗೆ ನೀಡುತ್ತಿರುವ ಸಂಬಳ ಹಾಗು ಇತರೆ ಗೌರವವನ್ನು ಭಾಷೆಯನ್ನು ಹೇಳಿಕೊಡುವ ಕ್ರಿಶ್ಚಿಯನ್ ಮಿಷನರಿಗಳಿಗೂ ಒದಗಿಸುವುದು. ಮೈಸೂರು ಸಂಸ್ಥಾನದ ಒಳಗೆ ಬರುವ ಎಲ್ಲಾ ಶಾಲೆಗಳಲ್ಲಿಯೂ ಈ ಪದ್ಧತಿ ಅನ್ವಯಿಸುವಂತೆ ದೃಢೀಕರಿಸುವುದು. ಇದನ್ನು ನೋಡಿಕೊಳ್ಳಲು ಮತ್ತು ಇದರ ಮೇಲ್ವಿಚಾರಣೆಗಾಗಿ ಸೂಪರಿಟೆಂಡೆಂಟ್‌ಗಳನ್ನು ನೇಮಿಸುವುದು. ಇವರು ಸರ್ಕಾರ ಮತ್ತು ಶಾಲೆಗಳ ನಡುವಣ ಸೇತುವೆಯಂತೆ ವರ್ತಿಸುವುದು. ಶಾಲೆಗಳಿಗೆ ಬೇಟಿ ನೀಡಿ ಅದರ ಸ್ಥಿತಿಗತಿಗಳನ್ನು ವೀಕ್ಷಿಸಲು ಇನ್ಸ್‌ಫೆಕ್ಟರನ್ನು ನೇಮಿಸುವುದು. ಈ ಮೂಲಕ ಪ್ರಾಯೋಗಿಕ ಭಾಷಾ ಬೆಳವಣಿಗೆಯನ್ನು ಉತ್ತೇಜಿಸುವುದು ಇದರ ಮೂಲ ಗುರಿಯಾಗಿದೆ.

ಶೀಘ್ರವಾಗಿ ಸಾಮಾನ್ಯ ಭಾಷಾ ತರಬೇತಿ ತರಗತಿಗಳನ್ನು ಪ್ರತಿಷ್ಠಾಪಿಸಿ, ಈ ತರಗತಿಗಳು ಬೆಂಗಳೂರು ನೇಟಿವ್ ಎಜುಕೇಷನ್ ಇನ್ಸ್‌ಟಿಟ್ಯೂಷನ್ ಅಧೀನದಲ್ಲಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳುವುದು. ಸಾಮಾನ್ಯ ಮತ್ತು ಮೂಲಭೂತ ಪ್ರಸ್ತಾಪವನ್ನು ಕಮಿಷನರ್ ಗಮನಕ್ಕೆ ತರುವುದು. ಅಲ್ಲದೇ ಈ ಪ್ರಸ್ತಾಪವನ್ನು ಅಂಗೀಕರಿಸುವಂತೆ ಅವರಲ್ಲಿ ಕೋರಿಕೊಳ್ಳುವುದು.

ಇಂಗ್ಲಿಷ್ ಭಾಷಾ ತರಗತಿಗಳನ್ನು ನಗರ, ಪಟ್ಟಣ ಮತ್ತು ಸರ್ಕಾರದ ವ್ಯಾಪ್ತಿಗೆ ಒಳಪಡುವ ಎಲ್ಲಾ ಆಡಳಿತ ಕೇಂದ್ರಗಳಲ್ಲೂ ತೆರೆಯುವುದು. ಭಾಷೆಯ ಮೇಲೆ ಹಿಡಿತ ಸಾಧಿಸಲು ಇಂಗ್ಲಿಷ್ ಭಾಷೆಯನ್ನು ಬಳಸುವುದನ್ನು ಕಡ್ಡಾಯ ಮಾಡಿ, ಒಂದೆರಡು ಪಟ್ಟಣಗಳಲ್ಲಿ ಪ್ರಯೋಗ ಮಾಡುವುದು. ಇದರೊಂದಿಗೆ ಸಾಕಷ್ಟು ಪ್ರಮಾಣದಲ್ಲಿ ಮುಖ್ಯಸ್ಥರನ್ನು, ಶಿಕ್ಷಕರನ್ನು ನೇಮಿಸುವುದು. ಮೈಸೂರು ಸಂಸ್ಥಾನದ ವ್ಯಾಪ್ತಿಗೆ ಒಳಪಡುವ, ಬೆಂಗಳೂರು ಪೇಟೆ, ಬೆಂಗಳೂರು ಕಂಟೋನ್ಮೆಂಟ್,

ಮೈಸೂರು, ಟ್ರಾವಂಕೂರ್, ಶಿವಮೊಗ್ಗ, ಹಾಸನ ವಿಭಾಗಗಳಲ್ಲಿ ಇಂಗ್ಲಿಷ್ ಭಾಷಾ ಶಾಲೆಗಳನ್ನು ತೆರೆಯುವುದು.

ಭಾಷಾ ಅಭಿವೃಧಿಗೆ ಅನುಗುಣವಾಗಿ ಸಾಮಾನ್ಯ ತರಗತಿಗಳಲ್ಲೂ ಆಂಗ್ಲ ಭಾಷಾ ತರಗತಿಗಳ ನಿಯಮಗಳು ಅನ್ವಯವಾಗುವಂತೆ ಮಾಡಿ, ಅವುಗಳು ಬೆಂಗಳೂರು ವಿದ್ಯಾಸಂಸ್ಥೆಗಳ ಅಧೀನದಲ್ಲಿ ಕಾರ್ಯ ನಿರ್ವಹಿಸುವಂತೆ ಉತ್ತೇಜಿಸುವುದು. ಖಾಲಿ ಇರುವ ಹುದ್ದೆಗಳನ್ನು ಶೀಘ್ರವಾಗಿ ತುಂಬಿ ಭಾಷಾ ಅಭಿವೃಧಿ ಯೋಜನೆಗಳು ಕನಿಷ್ಟ 3 ವರ್ಷಗಳೊಳಗಾಗಿ ನೆರವೇರುವಂತೆ ನೋಡಿಕೊಳ್ಳುವುದು. ನಿಯೋಜಿತ ಶಿಕ್ಷಕರುಗಳು ಅರ್ಹ ವಿದ್ಯಾರ್ಹತೆಯನ್ನು ಹೊಂದಿರುವಂತೆ ನೋಡಿಕೊಳ್ಳುವುದು.

ಮೈಸೂರು ಮತ್ತು ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ಒಂದು ಶಾಲೆಗೆ ಕನಿಷ್ಟ ಇಬ್ಬರು ಶಿಕ್ಷಕರನ್ನು ನೇಮಿಸಿ, ಅದಕ್ಕಿಂತ ಕಡಿಮೆಯಾಗದಂತೆ ಗಮನ ವಹಿಸುವುದು.

ಸರ್ಕಾರವು ಶಿಕ್ಷಕರ ವೇತನ ಮತ್ತು ಗೌರವಧನದ ಮೇಲೆ ಗಮನ ಹರಿಸಿದರೆ, ಅವರಿಗೆ ಸಿಗಬೇಕಾದ ಗೌರವವು ಸಿಗುವುದು. ವೇತನ ಪರಿಷ್ಕರಣೆಯಿಂದ ಅರ್ಹ ಶಿಕ್ಷಕರನ್ನು ನಿಯೋಜಿಸಲು ಸಾಧ್ಯವಾಗುತ್ತದೆ. ಶಿಕ್ಷಕರ ವೇತನ ಕಡಿಮೆಯಾದರೆ, ಅವರ ಘನತೆ ಕುಂದಿ, ಅದು ಮಕ್ಕಳ ಮೇಲೆ ಪರಿಣಾಮ ಬೀರಿ ಅವರ ಕಲಿಕೆಗೆ ದಕ್ಕೆ ಉಂಟಾಗುತ್ತದೆ. ಉತ್ತಮ ಗೌರವಧನ ನೀಡಲು ಸಾಧ್ಯವಾಗದಿರುವುದರಿಂದ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ನಿರ್ಧರಿಸಲಾಗಿದೆ. ತಾತ್ಕಾಲಿಕವಾಗಿ ನೇಮಿಸಿಕೊಳ್ಳುವ ಅರ್ಹ ಶಿಕ್ಷಕರಿಗೆ ಕನಿಷ್ಟ 100 ರೂಪಾಯಿಗಳ ತಿಂಗಳ ಗೌರವಧನ ನೀಡುವುದು, ಅಥವಾ 80 ರೂಪಾಯಿ ಮತ್ತು ವಸತಿ ವ್ಯವಸ್ಥೆಯನ್ನು ಮುಖ್ಯ ಶಿಕ್ಷಕರಿಗೆ ನೀಡುವುದು. ಎರಡನೇ ದರ್ಜೆ ಶಿಕ್ಷಕರಿಗೆ 70 ರೂಪಾಯಿಗಳ ವೇತನ ಅಥವಾ 50 ರೂಪಾಯಿ ಮತ್ತು ವಸತಿ ವ್ಯವಸ್ಥೆಯನ್ನು ನೀಡುವುದು. ಜೊತೆಗೆ ಬಡ್ತಿ ನೀಡುವುದು.

ಉತ್ತಮ ಶಾಲೆಯಲ್ಲಿ ಶಾಲಾ ಕೊಠಡಿಗಳು, ಆಟದ ಮೈದಾನ, ಪಿಠೋಪಕರಣಗಳು ಮತ್ತು ಇತರ ಸವಲತ್ತುಗಳನ್ನು ಹೊಂದಿರಬೇಕು ಎಂದು ತಿಳಿಸಿದರು. ವಿದ್ಯಾರ್ಥಿಗಳ ಹಾಜರಾತಿ ಮತ್ತು ಇತರ ಖರ್ಚುಗಳ ನಿರ್ವಹಣೆಗೆ ಅವರಿಂದ ಶುಲ್ಕವನ್ನು ಪಡೆಯುವುದು. ಸಂಪೂರ್ಣ ಹಾಜರಾತಿ ಇರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವುದರ ಜೊತೆಗೆ ಉನ್ನತ ಶಿಕ್ಷಣಕ್ಕಾಗಿ ಆ ವಿದ್ಯಾರ್ಥಿಯನ್ನು ಬೆಂಗಳೂರಿನಲ್ಲಿರುವ ಸೆಂಟ್ರಲ್ ಇನ್‌ಸ್ಟಿಟ್ಯೂಟ್‌ಗೆ ಕಳುಹಿಸುವುದು ಹಾಗೂ ಆ ವಿದ್ಯಾರ್ಥಿಗಳಿಗೆ ಮುಂದಿನ ದಿನಗಳಲ್ಲಿ ಸರ್ಕಾರಿ ಕೆಲಸಗಳನ್ನು ಪಡೆದುಕೊಳ್ಳಲು ಆದ್ಯತೆ ನೀಡುವುದು. ಇವರನ್ನು ಸಮಾಜ ಸೇವಕರನ್ನಾಗಿ ನೇಮಿಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸಬೇಕು.

ಈ ಮೇಲ್ಕಂಡಂತೆ ಕೂಲಂಕಷವಾಗಿ ನಮೂದಿಸಿರುವ ವಿಷಯವು ಆಂಗ್ಲ ಭಾಷೆಯ ಜ್ಞಾನ ಮತ್ತು ಕಲಿಕೆಗೆ ಸಂಬಂಧಪಟ್ಟಿರುತ್ತದೆ. ಇದರ ಉಪಯೋಗವನ್ನು ಮೈಸೂರು ಸಂಸ್ಥಾನದ ಯುವಕರು ಬಳಸಿಕೊಳ್ಳಲು ಅರ್ಹರಾಗಿರುತ್ತಾರೆ. ಪಾಶ್ಚಾತ್ಯ ಶಿಕ್ಷಣದಲ್ಲಿ ಇಂಗ್ಲಿಷ್ ಭಾಷೆಯನ್ನು ಕಲಿಸುವುದು ಬಹಳ ಕಷ್ಟಕರವಾಗಿರುವುದರಿಂದ ಅದರ ಕಲಿಯುವಿಕೆ ಮತ್ತು ಕಲಿಸುವುದಕ್ಕಾಗಿ ಸಂಪೂರ್ಣ ಗಮನ ಹರಿಸುವುದು ಅತ್ಯವಶ್ಯಕ.

ಈಗಾಗಲೇ ಅಸ್ಥಿತ್ವದಲ್ಲಿರುವ ಪ್ರಾವಿನ್ಸಿಯಲ್ ಸ್ಕೂಲ್ಸ್‌ಗಳಲ್ಲಿ ದೇಶಿಯ ಶಿಕ್ಷಣ ಅಥವಾ ಮಾತೃಭಾಷಾ ಶಿಕ್ಷಣವನ್ನು ಪ್ರಾಯೋಗಿಕವಾಗಿ ಪ್ರಾರಂಭಿಸುವುದು. ಮಾತೃಭಾಷಾ ಕಲಿಕೆಗಾಗಿ ಸಾಮಾನ್ಯ ತರಗತಿಗಳನ್ನು ನಿಯೋಜಿಸುವುದು. ಇದರಲ್ಲಿ ಶಿಕ್ಷಣವನ್ನು ನೀಡಲು ಪ್ರಾಂತೀಯ ಯುವಕರನ್ನು ನೇಮಿಸಿ ಕೊಳ್ಳುವುದು ಅಥವಾ ಈಗಾಗಲೆ ವಿದ್ಯಾರ್ಥಿ ವೇತನ ಪಡೆಯುತ್ತಿರುವ ವಿದ್ಯಾರ್ಥಿಗಳನ್ನು ಶಿಕ್ಷಕರನ್ನಾಗಿ ನೇಮಿಸಿ ಅವರನ್ನು

ಅದರ ಆಡಳಿತವನ್ನು ನೋಡಿಕೊಳ್ಳಲು ಅಧಿಕಾರಿಗಳನ್ನಾಗಿ ನಿಯೋಜಿಸುವುದು. ಇವರುಗಳು ಇದರ ಪರಿಶೀಲನೆ, ಸಂಬಳ ಎಲ್ಲವನ್ನೂ ನಿಗದಿಪಡಿಸುವುದು.

ದೇಶಿಯ ಮತ್ತು ಪ್ರಾಂತೀಯ ಶಿಕ್ಷಣ ಸಂಸ್ಥೆಗಳು ಕೂಡ ಇದರ ಬಗ್ಗೆ ಅರ್ಜಿಗಳನ್ನು ಸಲ್ಲಿಸಿದ್ದು ಇದುವರೆಗೂ ಅವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಇರುವ ಕಾರಣ ನಮ್ಮಲ್ಲಿ ಅರ್ಹ ಶಿಕ್ಷಕರು ಇರುವುದಿಲ್ಲ. ಅಲ್ಲದೆ ಇಂಗ್ಲಿಷ್ ಭಾಷೆಯನ್ನು ಹೇಳಿಕೊಡುವ ಕ್ರಿಶ್ಚಿಯನ್ ಮಿಷನರಿಗಳು ಇರುವುದಿಲ್ಲ. ಈ ಆದೇಶವನ್ನು ಮಾನ್ಯ ಮಾಡಿ ಈ ಭಾಗಗಳಲ್ಲಿ ಇಂಗ್ಲಿಷ್ ಹೇಳಿಕೊಡಲು ಕ್ರಿಶ್ಚಿಯನ್ ಮಿಷನರಿಗಳನ್ನು ನೇಮಿಸುವುದು.

ಈ ನಿರ್ದೇಶನವನ್ನು ಮೈಸೂರು ಭಾಗದಲ್ಲಿ ಪ್ರಯೋಗಿಸಿದರೆ ಸಾಕಷ್ಟು ಮಟ್ಟಿಗೆ ಅದರ ಪ್ರಯೋಜನ ಪಡೆದು, ಉನ್ನತವಾಗಿ ನಡೆದಲ್ಲಿ ಇದೇ ಮಾದರಿಯ ಶಾಲೆಗಳನ್ನು ಭಾರತದ ಇತರೆ ಭಾಗಗಳಲ್ಲೂ ನಡೆಸಲು ಅನುಮೊದಿಸುವುದು. ಇದನ್ನು ಕಡಿಮೆ ಖರ್ಚಿನಲ್ಲಿ ಕೈಗೊಳ್ಳುವುದು ಗುರಿ. ಇದರ ಸಲುವಾಗಿ ವರ್ಷಕ್ಕೊಂದು ವರದಿಯನ್ನು ಮಂಡಿಸುತ್ತಾ, ಶಾಲೆಗಳು ಸರಿಯಾಗಿ ನಡೆಯುತ್ತಿರುವ ಬಗ್ಗೆ, ಪರೀಕ್ಷೆ, ಅನುದಾನ, ವಿತರಣೆ, ಮೈಸೂರು ಪ್ರಾಂತ್ಯಗಳಲ್ಲಿ ಬರುವ ಎಲ್ಲಾ ಶಾಲೆಗಳಲ್ಲಿಯೂ ಇದರ ನಿರ್ವಹಣೆ ನಡೆಯುತ್ತಿದೆಯೇ ಎಂಬುದರ ಬಗ್ಗೆ ವರದಿ ಮಾಡುವುದು.

ಮೇಲಿನ ನಿಯಮಗಳನ್ನು ಪಾಲಿಸಲು ವಾರ್ಷಿಕ ಖರ್ಚುಗಳಿಗೆ 20,000 ರೂಪಾಯಿಗಳ ಅವಶ್ಯಕತೆ ಇದೆ. ಇದರೊಂದಿಗೆ ಪ್ರಸ್ತುತ ಸುಮಾರು 500 ರೂಪಾಯಿಗಳನ್ನು ತಿಂಗಳಿನ ಖರ್ಚಿಗಾಗಿ ಬಿಡುಗಡೆ ಮಾಡುವುದು. ಹೀಗೆ ಅನೇಕ ಕಾರ್ಯಕ್ರಮಗಳು 1853ರಲ್ಲಿ ಮೈಸೂರು ಸಂಸ್ಥಾನವು ಶಿಕ್ಷಣ ವಿಸ್ತರಣೆಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಇಡೀ ರಾಷ್ಟ್ರಕ್ಕೆ ಮಾದರಿ ಸಂಸ್ಥಾನವಾಗಿ ಬೆಳೆಯಿತು.

**ಉಪಸಂಹಾರ**

ಗ್ಯಾರೆಟ್ ಜೆ ರವರು ಕಮಿಷನ್ ರವರಿಗೆ ಒಂದು ಪತ್ರವನ್ನು ಅಕ್ಟೋಬರ್ 11, 1853 ರಲ್ಲಿ ಮಂಡಿಸಿದ್ದಾರೆ. ಗ್ಯಾರೆಟ್ ರವರು ಸರ್ಕಾರಕ್ಕೆ ಸಲ್ಲಿಸಿದ ಮನವಿ ಪತ್ರವನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಕಮಿಷನರ್ ಆಳ್ವಿಕೆಯಲ್ಲೂ ಮೈಸೂರು ಸಂಸ್ಥಾನದ ಶೈಕ್ಷಣಿಕ ಅಭಿವೃಧಿಗೆ ಆದ್ಯತೆ ನೀಡಿರುವುದು ತಿಳಿಯುತ್ತದೆ. ಅಲ್ಲದೆ ಆಂಗ್ಲ ಭಾಷಾ ಶಿಕ್ಷಣವನ್ನು, ಪ್ರಾದೇಶಿಕ ಶಿಕ್ಷಣವನ್ನಾಗಿ ರೂಪಿಸುವ ಮುಖಾಂತರ ಎಲ್ಲಾ ಪ್ರಜೆಗಳಿಗೂ ಶಿಕ್ಷಣವನ್ನು ಕಲಿಯುವ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ. ಇವರ ಮುಖ್ಯ ಉದ್ದೇಶ ಪ್ರಾದೇಶಿಕವಾಗಿ ಇಂಗ್ಲಿಷ್ ಶಿಕ್ಷಣದ ಬೆಳವಣಿಗೆಯಿಂದ ತಮ್ಮ ಆಡಳಿತಕ್ಕೆ ಅಧಿಕಾರಿ ವರ್ಗಗಳನ್ನು ಅಭಿವೃಧಿಪಡಿಸುವುದಾಗಿದ್ದರೂ, ಆಂಗ್ಲ ಭಾಷಾ ದೇಶಿಯ ಶಿಕ್ಷಣದ ಬೆಳವಣಿಗೆ ಮುಂದಿನ ನಾಲ್ವಡಿ ಮತ್ತು ದಿವಾನರುಗಳ ಕಾಲದಲ್ಲಿ ಹಲವಾರು ಕ್ಷೇತ್ರಗಳಲ್ಲಿ ಶ್ರೇಯೋಭಿವೃಧಿಯನ್ನು ಹೊಂದಲು ನಾಂದಿಯಾಯಿತು.

**ಪರಾಮರ್ಶನ ಗ್ರಂಥಗಳು**


- ರೆವರೆಂಡ್ ಜೆ ಗ್ಯಾರೆಟ್‌ರವರು ಬೆಂಗಳೂರಿನ ಕಮಿಷನರ್‌ಗೆ ಬರೆದ ಪತ್ರ –ಫೈಲ್ ನಂ. 1/1853
- ಕರ್ನಾಟಕದ ಇತಿಹಾಸ – ಕೆ.ಎನ್.ಎ
- Church Missionary Society. (1853). *Mission records and educational reports relating to Mysore State*. CMS Archives.
- Frykenberg, R. E. (1986). Modern education in South India: Its roots and growth, 1784–1854. *The Journal of Asian Studies*, *45*(3), 481–507.

- Government of Mysore. (1853). *Report on Public Instruction in the Mysore State, 1853*. Mysore Government Press.
  *(If the exact 1853 edition is unavailable, use the nearest available year and adjust the date.)*
- Government of Mysore. (1868). *Report on Public Instruction in Mysore for the year 1867–68*. Mysore Government Press.
- Kumar, A. (1997). *Education and social change in Mysore State (1800–1900)*. Bangalore: Vachana Publications.
- London Missionary Society. (1853). *Annual report of the London Missionary Society, with special reference to Canarese and Mysore educational missions*. LMS Press.
- Nair, J. (2013). The classroom as sensorium in princely Mysore, 1840–1930. *History of Education, 42*(4), 403–421.
- Rao, C. H. (1927). *The Mysore Gazetteer* (Vols. 1–3). Mysore Government Press.
  *(Contains historical data and summaries on 19th-century education.)*
- Sathyan, B. N. (1965). *A history of education in Mysore State*. Mysore University Press.
- Srinivas, M. N. (1976). *The remembered village*. Delhi: Oxford University Press.
  *(Useful for understanding social structure influencing schooling patterns.)*